ಸರ್ಕಾರ ಎಷ್ಟು ಸಾಲಕೊಟ್ಟಿದೆ ಎನ್ನತಕ್ಕಂಥದ್ದನ್ನು ಮತ್ತು ಎಷ್ಟು ಈಕ್ವಿಟಿ ಕೊಟ್ಟಿದೆ ಎಂಬುದನ್ನು ಹಾಗೂ ಎಷ್ಟು ಗ್ಯಾರಂಟಿ ಕೊಟ್ಟಿದೆ ಎನ್ನತಕ್ಕಂಥ ಮಾಹಿತಿ ಬೇಕಾದರೆ ನಾನು ಖಂಡಿತ ಒದಗಿಸಿಕೊಡುತ್ತೇನೆ. ಎಲ್ಲಾ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಈ ಎಲ್ಲಾ ಮಾಹಿತಿ ಬೇಕಾದರೆ ಕಳುಹಿಸಿಕೊಡುತ್ತೇನೆ. ಅಥವಾ ಪರ್ಟಿಕ್ಯುಲರ್ ಆಗಿ ಅವರು ಯಾವುದು ಕೇಳುತ್ತಾರೆಯೋ ಅದಕ್ಕೆ ಸಂಬಂಧಪಟ್ಟಂಥ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು : ಮುಂದಿನ ಪ್ರಶ್ನೆಯನ್ನು ಮಾನ್ಯ ನಾರಾಯಣಸ್ವಾಮಿವರು ಕೇಳಿ. ಮಾನ್ಯ ಸದಸ್ಯರು ಬಂದಿಲ್ಲ.

ಅರಣ್ಯ ಭೂಮಿಯಲ್ಲಿ ಗಣಿಗಾರಿಕೆಯ ಗುತ್ತಿಗೆ

398 (3436) : ಶ್ರೀ ಶಿವಶಂಕರ ರೆಡ್ಡಿ ಎ.ಹೆಚ್. (ಗೌರಿಬಿದನೂರು) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

(ಅ) ಅರಣ್ಯ ಭೂಮಿಯಲ್ಲಿ ಗಣಿ ಗುತ್ತಿಗೆ ಸರ್ಕಾರ ನೀಡಿದಂತೆ ಅರಣ್ಯ ಇಲಾಖೆ ಅನುಮೋದನೆಯನ್ನು ನೀಡಲು ಹೆಚ್ಚು ಖರ್ಚು ಮತ್ತು ವಿಳಂಬ ಹಾಗೂ ಕಷ್ಟಕರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ವಿಳಂಬದಿಂದ ಗುತ್ತಿಗೆದಾರರಿಗೆ ತೊಂದರೆ ಮತ್ತು ಗಣಿಗಾರಿಕೆಯ ಅಭಿವೃದ್ಧಿಗೆ ಅಡಚಣೆಗಳು ಆಗುವುದರ ಬಗ್ಗೆ ಸರ್ಕಾರದ ಕ್ರಮವೇನು;

(ಇ) ಗುತ್ತಿಗೆಗೆ ಅರ್ಜಿ ಸಲ್ಲಿಸಿ ವರ್ಷಗಳಾದರೂ ಗುತ್ತಿಗೆ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಈ ವಿಳಂಬ ನೀತಿಯಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯ ಕುಂಠಿತವಾಗಿಲ್ಲವೇ; ಇದಕ್ಕೆ ಸರ್ಕಾರದ ಕ್ರಮವೇನು;

(ಉ) ಇತ್ತೀಚೆಗೆ ರಾಜ್ಯಾದ್ಯಂತ ಗಣಿ ಗುತ್ತಿಗೆ ಜೆಟ್ ನೋಟಿಫಿಕೇಷನ್ ಮಾಡಿದ್ದು ನೂರಾರು ಅರ್ಜಿಗಳು ಬಂದಿದ್ದು, ಯಾವಾಗ ಇತ್ಯರ್ಥಪಡಿಸಲಾಗುತ್ತದೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

(ಅ) ಬಂದಿದೆ.

(ಆ) ಅಂತಹ ಅಡಚಣೆ ತಪ್ಪಿಸಲು ಗಣಿ ಗುತ್ತಿಗೆ ನೀಡುವ ಮೊದಲು ಅರಣ್ಯ, ಪರಿಸರ ಇಲಾಖೆಗಳ ಸಹಮತಿ ಪಡೆಯಲಾಗುತ್ತದೆ.

(ಇ) ಬಂದಿದೆ.

(ಈ) ಹೌದು; ಗಣಿ ಗುತ್ತಿಗೆ ನೀಡುವ ಮೊದಲು ಕಂದಾಯ ಇಲಾಖೆ, ಅರಣ್ಯ ಇಲಾಖೆ, ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಮತ್ತು ಪರಿಸರ ಇಲಾಖೆಗಳ ಅನುಮತಿಗಳನ್ನು ಪಡೆಯಬೇಕಾಗಿದೆ. ಆ ಸಂಬಂಧ ವಿಳಂಬ ತಪ್ಪಿಸುವ ಉದ್ದೇಶದಿಂದ ಇಲಾಖೆಗಳು ಸಹಮತಿ ನೀಡುವ ಕುರಿತಂತೆ ಕಾಲಮಿತಿ ನಿಗದಿಪಡಿಸಲಾಗಿದೆ.

(ಉ) ಈ ಜೆಟ್ ನೋಟಿಫಿಕೇಷನ್ ಕುರಿತಂತೆ ಬಹಳಷ್ಟು ಅರ್ಜಿಗಳು ಬಂದಿದ್ದು, ಅವುಗಳನ್ನು ಎಂ.ಎಂ.ಡಿ.ಆರ್. ಕಾಯ್ದೆ, 1957 ಮತ್ತು ಎಂ.ಸಿ.ಆರ್., 1960ರ ನಿಯಮದ ಪ್ರಕಾರ ಪರಿಶೀಲಿಸಿ ಕೇಂದ್ರ ಸರ್ಕಾರದ ಅನುಮೋದನೆ ಪಡೆದು ಇತ್ಯರ್ಥ ಪಡಿಸಲಾಗುವುದು.

ಶ್ರೀ ಎ.ಹೆಚ್. ಶಿವಶಂಕರ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಅರಣ್ಯ ಭೂಮಿಯಲ್ಲಿ ಗಣಿ ಗುತ್ತಿಗೆ ನೀಡುವುದಕ್ಕೆ ಬಹಳಷ್ಟು ನಿಧಾನ ಆಗುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಮತ್ತೆ ಅರಣ್ಯ ಮತ್ತು ಪರಿಸರ ಇಲಾಖೆ ಒಪ್ಪಿಗೆ ಪಡೆಯುವುದಕ್ಕೆ ತಡವಾಗುತ್ತಿದೆ ಎನ್ನತಕ್ಕಂಥದ್ದನ್ನು ಸಹ ತಿಳಿಸಿದ್ದಾರೆ. ಇದಕ್ಕೆ ನಿರ್ದಿಷ್ಟವಾದ ಕಾಲಮಿತಿ ಏನಾದರೂ ಕೊಡುವುದಕ್ಕೆ ಆಗುತ್ತದೆಯೋ ಎಂಬುದನ್ನು ಸ್ಪಷ್ಟೀಕರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಪಶ್ಚಿಮಘಟ್ಟ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವುದಕ್ಕೆ ಯಾರಿಗೂ ಕೂಡ ಪರವಾನಿಗೆಯನ್ನು ನೀಡುವುದಿಲ್ಲವೆಂದು ಮೇಲ್ಮನೆಯಲ್ಲಿ ಈಗಾಗಲೇ ಹೇಳಿದ್ದಾರೆ. ಆದ್ದರಿಂದ, ಇದರ ಬಗ್ಗೆಯೂ ಕೂಡ ಏನು ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂಬುದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಮುನಿಯಪ್ಪ : ಮಾನ್ಯ ಸಭಾಧ್ಯಕ್ಷರೆ, ಅರಣ್ಯ ಇಲಾಖೆಯ ಅರಣ್ಯ ಕಾಯಿದೆ 1989 ಸೆಕ್ಷನ್ 2ರ ಪ್ರಕಾರ ದೃಢೀಕರಣ ಪತ್ರ ನಮಗೆ ಕಡ್ಡಾಯವಾಗಿ ಬೇಕಾಗುತ್ತದೆ. ಇದು ಬರದೇ ಅರಣ್ಯ ಪ್ರದೇಶದಲ್ಲಿ ಯಾವುದೇ ಗಣಿಗಾರಿಕೆಗೆ ಅನುಮತಿ ಕೊಡುವುದಕ್ಕೆ ಸಾಧ್ಯವಿಲ್ಲ. ಮತ್ತೆ 6 ತಿಂಗಳೊಳಗಾಗಿ ನಿಮ್ಮ ಎನ್.ಓ.ಸಿ.ಯನ್ನು ಕೊಡಲೇ ಬೇಕೆಂದು ನಮ್ಮ ಗಣಿ ಪಾಲಿಸಿಯಲ್ಲಿ ನಿಗದಿ ಮಾಡಿಕೊಂಡಿದ್ದೇವೆ. ಹೀಗಿದ್ದರೂ ಕೂಡ ಹಲವಾರು ಸಂದರ್ಭದಲ್ಲಿ ಅವರು ಕೊಡುವುದಿಲ್ಲ. ಆದರೆ ಅವರು ಇದನ್ನು ಕೊಡದೇ ಇದ್ದರೆ ನಾವೂ ಕೂಡ ಕೊಡುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾದ ಕಟ್ಟುನಿಟ್ಟಿನ ಕಾಯಿದೆ ಇದೆ. ಆದರೂ ಕೂಡ ನಿಮ್ಮ ಒಪೀನಿಯನ್ ಕಳುಹಿಸಿಕೊಡಿ ಎಂದು ನಾವು ಮತ್ತೆ ಮತ್ತೆ ರಿಮೈಂಡರ್ ಲೆಟರ್ ಬರೆದು ಆಗಾಗ್ಗೆ ಅವರಿಗೆ ಕಳುಹಿಸುತ್ತಿರುತ್ತೇವೆ. ಅಂತಿಮವಾಗಿ ಅವರಿಂದ ಒಪ್ಪಿಗೆ ಬಂದ ಮೇಲೆಯೇ ಗಣಿಗಾರಿಕೆ ಗುತ್ತಿಗೆಯನ್ನು ಕೊಡುವುದಕ್ಕೆ ಅವಕಾಶ ಇದೆ. ಮತ್ತೆ ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಗಣಿಗಾರಿಕೆಗೆ ಅನುಮತಿ ಕೊಡುವುದಿಲ್ಲ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಪಶ್ಚಿಮಘಟ್ಟದ ಅರಣ್ಯ ಪ್ರದೇಶಗಳಲ್ಲಿ ಯಾವುದೇ ಸಂದರ್ಭದಲ್ಲಿ ಕೂಡ ಗಣಿಗಾರಿಕೆಗೆ ಪರವಾನಗಿ ಕೊಡುವುದಿಲ್ಲ ಎಂದು ಸರ್ಕಾರ ಈಗಾಗಲೇ ಘೋಷಣೆ ಮಾಡಿದೆ. ಈಗ ಅಲ್ಲಿರತಕ್ಕಂಥ ಕುದುರೆ ಮುಖ ಗಣಿಗಾರಿಕೆಯ ಅವಧಿ ಸುಪ್ರೀಂ ಕೋರ್ಟ್ ಡೈರೆಕ್ಷನ್ ಪ್ರಕಾರ ಮುಗಿದ ನಂತರ ಅಲ್ಲಿ ಹೊಸ ಗಣಿಗಾರಿಕೆ ಕೊಡುವುದಕ್ಕೆ ಸಾಧ್ಯವಿಲ್ಲ.

ಅಧ್ಯಕ್ಷರು : ಮುಂದಿನ ಪ್ರಶ್ನೆಗಳು ಮಾನ್ಯ ಜೆ.ಡಿ. ನಾಯ್ಕರವರು ಹಾಗೂ ಮಾನ್ಯ ಎ.ಎಸ್. ಗುರುಸ್ವಾಮಿಯವರು ಸದಸ್ಯರುಗಳು ಗೈರು ಹಾಜರಿದ್ದಾರೆ.

ಕೆ.ಹೆಚ್.ಡಿ.ಸಿಯಲ್ಲಿ ನೇಕಾರರಿಗೆ ವರ್ಷಪೂರ್ತಿ ಉದ್ಯೋಗಾವಕಾಶ ನೀಡುವುದು

401 (3586) : ಶ್ರೀ ಡಿ.ಆರ್. ಪಾಟೀಲ್ (ಗದಗ್) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯಾಪ್ತಿಯಲ್ಲಿ ಈಗ ಎಷ್ಟು ನೇಕಾರರು ಕೆಲಸ ಮಾಡುತ್ತಿದ್ದಾರೆ, ಯೋಜನಾ ಕೇಂದ್ರವಾರು ವಿವರ ನೀಡುವುದು?

ಆ) ಕೆ.ಹೆಚ್.ಡಿ.ಸಿಯಲ್ಲಿ ಅತ್ಯಧಿಕ ನೇಕಾರರು ಯಾವ ವರ್ಷ ಕೆಲಸ ನಿರ್ವಹಿಸುತ್ತಿದ್ದರು?

ಇ) ಈಗ ಕೆ.ಹೆಚ್.ಡಿ.ಸಿ. ನೇಕಾರರ ಸಂಖ್ಯೆ ಗಣನೀಯವಾಗಿ ಇಳಿಯಲು ಕಾರಣಗಳೇನು, ಈ ಇಳಿಕೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?